ಕೆಟ್ಟದ್ದು ಯಾವುದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ಒಂದು 20 ಅಂಶದ ಕಾರ್ಯಕ್ರಮ ಇತ್ತು. ಈಗ ಅದರ ಜೊತೆಗೆ ಹೊಸದಾಗಿ ಇನ್ನೊಂದು 20 ಅಂಶದ ಕಾರ್ಯಕ್ರಮ ಬಂದಿದೆ. ಕೇಂದ್ರ ಸರ್ಕಾರದವರು ಮತ್ತೆ ಏನುಮಾಡುತ್ತಾರೋ ಗೊತ್ತಿಲ್ಲ. ಇದರ ಜೊತೆಗೆ ಜನತಾ ಸರ್ಕಾರದ ಅಂತ್ಯೋದಯ ಕಾರ್ಯಕ್ರಮವನ್ನೂ ಸೇರಿಸಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸಾಮಾನ್ಯ ಜನರಿಗೆ ಅನುಕೂಲ ಮಾಡಿಕೊಡುವ ರೀತಿಯಲ್ಲಿ ಆಚರಣೆಗೆ ತರುತ್ತೇವೆ.

ಶ್ರೀ ಸಿ. ಬೈರೇಗೌಡ.—ಅದರ ಜೊತೆಗೆ 4 ಅಂಶದ ಕಾರ್ಯಕ್ರಮ ಇತ್ತಲ್ಲ, ಅದನ್ನು ಕೂಡ ಜಾರಿಗೆ ತರುತ್ತೀರಾ ?

(ಉತ್ತರ ಇಲ್ಲ.)

ಶ್ರೀ ಬಿ. ಶಿವಣ್ಣ.—ಜನತಾ ಪಕ್ಷದ ಅಂತ್ಯೋದಯ ಕಾರ್ಯಕ್ರಮಕ್ಕೂ, 20 ಅಂಶದ ಕಾರ್ಯಕ್ರಮಕ್ಕೂ ಪರಸ್ಪರ ಕಾನ್ಫ್ಲಿಕ್ಟ್ ಬರುತ್ತದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜನಹಿತ ಕಾರ್ಯಕ್ರಮದಲ್ಲಿ ಕಾನ್ಫ್ಲಿಕ್ಟ್ ಬರುವ ಪ್ರಶ್ನೆಯೇ ಇಲ್ಲ. 20 ಅಂಶದ ಕಾರ್ಯಕ್ರಮದಲ್ಲೂ ಒಳ್ಳೆಯ ಕಾರ್ಯಕ್ರಮ ಇದೆ. ಅಂತ್ಯೋದಯದಲ್ಲೂ ಇದೆ. ಎರಡೂ ಸೇರಿಸಿ ನಾವು ಕ್ರಮತೆಗೆದುಕೊಳ್ಳುತ್ತೇವೆ.

ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ದರ್ಜೆ ಆಸ್ಪತ್ರೆಗಳಲ್ಲಿ ಮಂಜೂರಾಗಿರುವ ವೈದ್ಯರ ಸಂಖ್ಯೆ ಬಗ್ಗೆ

167. ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಉತ್ತರಿಸುವರೇ:—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ದರ್ಜೆ ಆಸ್ಪತ್ರೆಗಳಲ್ಲಿ ಮಂಜೂರಾಗಿರುದ ವಿವಿಧ ದರ್ಜೆ ವೈದ್ಯರು ಮತ್ತು ಸಿಬ್ಬಂದಿಯ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರಗಳನ್ನೊದಗಿಸಬೇಕಾಗಿ ವಿನಂತಿ);

ಆ) ಕಳೆದ ಒಂದು ವರ್ಷದಿಂದ ಭರ್ತಿಯಾಗದೆ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಇಲಾಖೆಯ ಸಚಿವರು).—

ಅ) ಶಿವಮೊಗ್ಗ ಜಿಲ್ಲೆಯಲ್ಲಿ 101 ವಿವಿಧ ದರ್ಜೆ ಆಸ್ಪತ್ರೆಗಳು ಇದ್ದು, ಇಲ್ಲಿ 2095 ವಿವಿಧ ದರ್ಜೆ ಹುದ್ದೆಗಳು ಇವೆ.

2ನೇ ದರ್ಜೆ ಅಧಿಕಾರಿಗಳು	178
3ನೇ ದರ್ಜೆ ಅಧಿಕಾರಿಗಳು	1301
4ನೇ ದರ್ಜೆ ಅಧಿಕಾರಿಗಳು	616
ಒಟ್ಟು	2095

ತಾಲ್ಲೂಕುವಾರು ವಿವರಗಳನ್ನು ಆಲಾಯಿದ ಒದಗಿಸಲಾಗುವುದು.

ಆ) 326 ವಿವಿಧ ದರ್ಜೆ ನೌಕರರ ಹುದ್ದೆಗಳು ಖಾಲಿ ಇವೆ. ಇವುಗಳಲ್ಲಿ 19 ವೈದ್ಯಾಧಿಕಾರಿಗಳೂ ಮತ್ತು 13 ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳೂ ಸೇರಿವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಮಲೆನಾಡು ಭಾಗದಲ್ಲಿ ವೈದ್ಯಾಧಿಕಾರಿಗಳು ಸರಿಯಾಗಿಲ್ಲ ಎಂಬುದು ಸರ್ಕಾರದವರು ಗಮನಿಸಿದ್ದಾರೆಯೆ ? ವೈದ್ಯಾಧಿಕಾರಿಗಳಿಲ್ಲದೆ ಆಸ್ಪತ್ರೆ ಇದ್ದರೆ ಬರೀ ಕಟ್ಟಡ ಇದ್ದಹಾಗಾಯಿತು. ಆದರಿಂದ ಏನು ಪ್ರಯೋಜನ ? ಇದರ ಜೊತೆಗೆ ಅಲ್ಲಿ ವಿವಿಧ ರೋಗಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಹೇಳಿದಂತೆ ಅನೇಕ ವೈದ್ಯಾಧಿಕಾರಿಗಳ ಜಾಗಗಳು ಖಾಲಿ ಇರುವುದು ಸರ್ಕಾರದ ಗಮನದಲ್ಲಿದೆ. ಇದು ಕಳೆದ 6 ವರ್ಷಗಳಿಂದ ಖಾಲಿ ಇರತಕ್ಕ ಜಾಗಗಳು. ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷವಾಗಿ ಎರಡು ಮೂರು ತರಹ ರೋಗಗಳು ಹರಡುತ್ತಿರುವುದು ಸರ್ಕಾರದ ಗಮನದಲ್ಲಿದೆ. ಆದ್ದರಿಂದ ಅತಿ ಶೀಘ್ರದಲ್ಲೇ ಎಲ್ಲ ವೈದ್ಯಾಧಿಕಾರಿಗಳ ಖಾಲಿ ಜಾಗವನ್ನು ಭರ್ತಿ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಅಲ್ಲಿ ಅಂಗವಿಕಲತೆಯ ಕಾಯಿಲೆ ಮತ್ತು ಮಂಗನ ಕಾಯಿಲೆ ವಿಶೇಷವಾಗಿದೆ.

ಉಪಾಧ್ಯಕ್ಷರು.—ಅತಿ ಶೀಘ್ರದಲ್ಲೇ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಖಚಿತವಾದ ಕಾಲ ಹೇಳಿ ಸ್ವಾಮಿ. ಅತಿ ಶೀಘ್ರ ಎಂದು ಹೇಳಿದರೆ ಹೇಗೆ ?

ಉಪಾಧ್ಯಕ್ಷರು.—ಅತಿ ಶೀಘ್ರ ಎಂದು ಹೇಳಿದರೆ ಎರಡು ದಿವಸವಾಗಬಹುದು, ಮೂರು ದಿವಸವಾಗ ಬಹುದು, 15 ದಿವಸವಾಗಬಹುದು, ಅಥವಾ ಒಂದು ವರ್ಷವಾಗಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಒಂದು ವರ್ಷವಾಗುವುದಿಲ್ಲ ಸ್ವಾಮಿ. ಆದಷ್ಟು ಬೇಗ ಮಾಡುತ್ತೇವೆ.

ಮಾರಾಟ ತೆರಿಗೆಯಿಂದ ಬರುವ ಆದಾಯದ ಬಗ್ಗೆ

168. ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :

ಅ) 1981-82ರ ಆಯವ್ಯಯದಲ್ಲಿ ಕ್ರಯ ವಿಕ್ರಯದ ತೆರಿಗೆ ನಿರೀಕ್ಷಣೆ ಎಷ್ಟು; ಒಟ್ಟು ಸಂದಾಯವಾದ ಮೊತ್ತವೆಷ್ಟು ;

ಆ) ಈ ತೆರಿಗೆಯನ್ನು ಯಾವುದೇ ಕರ ಹೆಚ್ಚಿಸುವಾಗ ಯಾವ ಆಧಾರದ ಮೇಲೆ ಆಯವ್ಯಯ ನಿರೀಕ್ಷಣೆ ಪಟ್ಟಿ ತಯಾರಾಗುತ್ತದೆ ;

ಇ) ಹೆಚ್ಚಿಸಿದ ಕರ ಧಾರಣೆ ವೈಜ್ಞಾನಿಕವಾಗಿರುವುದೇ ಅಥವಾ ವ್ಯಾಪಾರ ಮನೋವೃತ್ತಿಯದಾಗಿರುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) 1981-82ರ ಆಯವ್ಯಯದ ಪ್ರಕಾರ ಮಾರಾಟ ತೆರಿಗೆ ನಿರೀಕ್ಷಣೆ ರೂ. 307 ಕೋಟಿ. ಸಂದಾಯವಾದ ಮೊತ್ತ ರೂ. 318.86 ಕೋಟಿ.

ಆ) ಮತ್ತು ಇ) ಹಿಂದೆ ಇದ್ದ ಮಾರಾಟಕರದ ಆದಾಯ ಮತ್ತು ಇತರ ಬಾಬ್ತುಗಳ ನಜ್ಜೀಕರಣ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯದ ಬೊಕ್ಕಸಕ್ಕೆ ಬೇಕಾಗುವ ಸಾಕಷ್ಟು ಹಣವನ್ನು ಪಡೆಯಲು, ಈ ಮಾರಾಟ ತೆರಿಗೆಯಲ್ಲಿ ಮಾರ್ಪಾಡುಗಳನ್ನು ಸೂಚಿಸಲಾಗುವುದು. ಹಿಂದಿನ ಪ್ರವೃತ್ತಿಯನ್ನು ನೆರೆ ರಾಜ್ಯಗಳಲ್ಲಿ ಇರುವಂತಹ ದರಗಳನ್ನು ಸೂಚಿಸಿರುವ ಪದಾರ್ಥಗಳ ವಿಕ್ರಯ ಮತ್ತು ಇತರೆ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಆದಾಯದ ಅಂದಾಜನ್ನು ಮಾಡಲಾಗುವುದು.

ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ.—ಅಧ್ಯಕ್ಷರೇ, ಈ ನಿಯಮದಿಂದ ಅನೇಕ ಜನ ವ್ಯಾಪಾರಸ್ಥರ ಸಂಘಸಂಸ್ಥೆಗಳವರಿಗೆ ಬಹಳ ತೊಂದರೆ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಆದ್ದರಿಂದ ಬಿಲ್‌ನಲ್ಲಿ ಈ ತೆರಿಗೆಯನ್ನು ವಸೂಲು ಮಾಡುವುದರ ಬದಲು ಅವರಿಂದಲೇ ಇದನ್ನು ವಸೂಲು ಮಾಡುವಹಾಗೆ ಕಾಯ್ದಿಗೆ ತಿದ್ದುಪಡಿ ಮಾಡುತ್ತೀರಾ ? ಹಾಗೂ ಈ ತೆರಿಗೆಯನ್ನು ತೆಗೆದುಹಾಕುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾರಾಟ ತೆರಿಗೆಯನ್ನು ತೆಗೆಯುವುದಕ್ಕೆ ಹೋಗುವುದಿಲ್ಲ. ಇದು ನಮ್ಮ ರಾಜ್ಯಕ್ಕೆ ಮುಖ್ಯವಾದ ಆದಾಯ. ಎರಡನೆಯದಾಗಿ ಏನು ಹೇಳಿದ್ದಾರೆ, ಆ ಬಗ್ಗೆ ವ್ಯಾಪಾರಸ್ಥರಿಂದ ಮನವಿಗಳು ಬಂದಿವೆ. ಮನವಿ ಆಧಾರದ ಮೇಲೆ ಈಗಾಗಲೇ ಬಜೆಟ್‌ನಲ್ಲಿ ಹೇಳಿರುವಂತೆ ಅನೇಕ ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. ಈ ತೆರಿಗೆ ವಸೂಲಿ ಮಾಡುವಾಗ ಬಿಲ್‌ನಲ್ಲಿ ಬರೆಯಲೇಬೇಕಾಗುತ್ತದೆ. ಅವರಿಗೆ ಬರತಕ್ಕ ಲಾಭದಿಂದ ಅದನ್ನು ವಸೂಲಿ ಮಾಡುವುದಕ್ಕಾಗುವುದಿಲ್ಲ. ವ್ಯಾಪಾರಸ್ಥರು ಖರೀದಿ ಮಾಡುತ್ತಾರೆ, ಅವರೇ ವಸೂಲಿ ಮಾಡಿ ಕೊಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ.—ನಾನು ಪ್ರಶ್ನೆ ಕೇಳಿರುವುದೇ ಟರ್ನ್ ಓವರ್ ಟ್ಯಾಕ್ಸ್ ಬಗ್ಗೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಪ್ರಶ್ನೆ ಇರುವುದು ಸೇಲ್ಸ್ ಟ್ಯಾಕ್ಸ್ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ.—ನಾನು ಪ್ರಶ್ನೆ ಕೇಳಿರುವುದೇ ಟರ್ನ್ ಓವರ್ ಟ್ಯಾಕ್ಸ್ ಬಗ್ಗೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ವ್ಯಾಪಾರಸ್ಥರ ಒಂದು ವ್ಯವಹಾರದ ಮೊತ್ತದ ಮೇಲೆ ಟರ್ನ್ ಓವರ್ ಟ್ಯಾಕ್ಸ್ ಹಾಕಲಾಗುತ್ತಿದೆ. ಇದರ ಬಗ್ಗೆ ಪ್ರಶ್ನೆಯೇ ಇಲ್ಲ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಕೆಲವು ವಸ್ತುಗಳ ಮೇಲೆ ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಹೆಚ್ಚು ಮಾರಾಟ ತೆರಿಗೆ ಇರುವುದರಿಂದ, ಬೇರೆ ರಾಜ್ಯಗಳ ತೆರಿಗೆ ನೋಡಿಕೊಂಡು ಇವನ್ನು ಸರಿಮಾಡಿಕೊಳ್ಳುವುದು ಅವಶ್ಯಕವಲ್ಲವೇ ? ಈ ತೆರಿಗೆ ಹೆಚ್ಚು ಇರುವುದರಿಂದ ತೆರಿಗೆ ತಪ್ಪಿಸಿಕೊಳ್ಳುವುದು ನಡೆಯುತ್ತಿದೆ. ಬಿಲ್ಲು ಹಾಕದೇ ವ್ಯಾಪಾರವನ್ನು ನಡೆಸುತ್ತಿದ್ದಾರೆ ಎಂಬುದನ್ನು ತಿಳಿದಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಬೇರೆ ಬೇರೆ ರಾಜ್ಯಗಳಿಗಿಂತಾ ಕೆಲವು ಪದಾರ್ಥಗಳ ಮೇಲೆ ನಮ್ಮಲ್ಲಿ ಹೆಚ್ಚು ಕರ ಇದೆ. ಕೆಲವು ವಸ್ತುಗಳ ಮೇಲೆ ನಮ್ಮ ರಾಜ್ಯದಲ್ಲಿ ಕಡಿಮೆ ದರ ಇದೆ. ಈ ಬಗ್ಗೆ ಸರ್ಕಾರ ಗುಲಾಟಿ ಕಮಿಟಿಯನ್ನು ನೇಮಿಸಿದ್ದು ಆ ಬಗ್ಗೆ ವರದಿ ಬಂದಿದೆ. ಅದರ ಆಧಾರದ ಮೇಲೆ ಬೇರೆ ಬೇರೆ ರಾಜ್ಯಗಳ ಹಾಗೂ ನಮ್ಮ ರಾಜ್ಯದ ತೆರಿಗೆ ಹೆಚ್ಚು ಕಡಿಮೆ ಇರಬಾರದೆನ್ನುವ ತತ್ವವನ್ನು ಒಪ್ಪಿಕೊಂಡಿದ್ದೇವೆ. ಹಾಗೂ ಕೆಲವು ಭಾಗದಲ್ಲಿ ತೆರಿಗೆಗಳನ್ನು ಕಡಿಮೆ ಸಹಾ ಮಾಡಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ ಸುಮಾರು 20-22 ಐಟಂಗಳ ಮೇಲೆ ನಮ್ಮ ರಾಜ್ಯದಲ್ಲಿ 50 ಪರ್ಸೆಂಟ್ ಟ್ಯಾಕ್ಸ್ ಹೆಚ್ಚು ಇದೆ. ನಿನ್ನೆಯ ಡೆಕ್ಕನ್